# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018

## संस्कृतोत्सवः - २०२५

**ಬನ್ನಿ, ಎಲ್ಲರೂ ಸಡಗರದಿಂದ ಸಂಭ್ರಮಿಸೋಣ**

ಸಂಸ್ಕೃತ ಭಾಷೆಯು ಭಾರತ ದೇಶದ ಸನಾತನ ಪರಂಪರೆಯ ಭದ್ರ ಬುನಾದಿ. ಸಂಸ್ಕೃತ ಭಾಷೆಯ ಸಾಹಿತ್ಯ ಶ್ರೀಮಂತಿಕೆಯು ಇತರ ಎಲ್ಲ ಭಾಷೆಗಳಲ್ಲೂ ಅನುಸ್ಯೂತವಾಗಿ ಹರಿದು ಬಂದಿದೆ. ಭಾರತೀಯ ಜ್ಞಾನಶಾಖೆಗಳು ಸಂಸ್ಕೃತವೆಂಬ ಬೇರಿನಿಂದ ಸಮೃದ್ಧವಾಗಿ ಬೆಳದು ನಿಂತಿವೆ. ಜ್ಞಾನ ಪರಂಪರೆಯ ಉಳಿವು ಮತ್ತು ವಿಸ್ತಾರ ಸಂಸ್ಕೃತದ ಅರಿವಿನಿಂದ ಅಧಿಕವಾಗುತ್ತದೆ. ಇಂತಹ ಪ್ರವೃದ್ಧ ಸುಸಂಸ್ಕೃತ ಭಾಷೆಯಾದ ಸಂಸ್ಕೃತದ ಹಾಗೂ ಶಾಸ್ತ್ರ ಪರಂಪರೆಯ ರಕ್ಷಣೆ, ಪೋಷಣೆ ಮತ್ತು ಅಭಿವೃದ್ಧಿಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕಟಿಬದ್ಧವಾಗಿದೆ.

ಶ್ರಾವಣ ಮಾಸವನ್ನು ಸಂಸ್ಕೃತ ಮಾಸವಾಗಿ ಆಚರಿಸುವುದು ಸರ್ವವಿದಿತ. ದೇಶದ ಎಲ್ಲೆಡೆ ಈ ಮಾಸದಲ್ಲಿ ಸಂಸ್ಕೃತೋತ್ಸವವನ್ನು ವೈಭವದಿಂದ ಆಚರಿಸಿ, ಸಂಸ್ಕೃತ ವಾಙ್ಮಯದ ಹಿರಿಮೆ ಗರಿಮೆಯನ್ನು ಕೊಂಡಾಡುತ್ತಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತೋತ್ಸವವನ್ನು ಇದೇ ಆಗಸ್ಟ್ ಮಾಹೆಯ 9ನೆಯ ತಾರಿಖಿನಂದು ಆಚರಿಸಲಿದೆ. ವಿಶ್ವವಿದ್ಯಾಲಯದ ಸಂಸ್ಕೃತೋತ್ಸವ ಆಚರಣೆಗೆ ಬೆಂಗಳೂರಿನ ವಿವಿಧ ಸಂಸ್ಥೆಗಳು ಸಹಯೋಗ ನೀಡಲಿದೆ. ಸಂಸ್ಕೃತ ಭಾರತೀ, ಸುರಸರಸ್ವತೀಸಭೆ, ಕರ್ನಾಟಕ ರಾಜ್ಯಪ್ರೌಢಶಾಲಾ ಸಂಸ್ಕೃತಾಧ್ಯಾಪಕಸಂಘ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರಗಳು, ಮೈತ್ರೀಸಂಸ್ಕೃತಪ್ರತಿಷ್ಠಾನ, ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಗೀತಗೋವಿಂದ ಸಂಸ್ಕೃತಸಂಘ, ರಸಧ್ವನಿಕಲಾಕೇಂದ್ರ, ಭಾರತೀಯ ವಿದ್ವತ್ಪರಿಷತ್, ಕೇಂದ್ರೀಯ ವಿದ್ಯಾಲಯ ಸಂಸ್ಕೃತಾಧ್ಯಾಪಕಗಣ, ವ್ಯೋಮ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಷನ್, ಸುರಭಾರತೀ ಸಂಸ್ಕೃತಸಂಸ್ಕೃತಿ ಪ್ರತಿಷ್ಠಾನ, ಜೈನ್ ವಿಶ್ವವಿದ್ಯಾಲಯ, ಪೂರ್ಣಪ್ರಜ್ಞವಿದ್ಯಾಪೀಠ, ವೇದವಿಜ್ಞಾನಗುರುಕುಲ, ಮಹಾಬೋಧಿ ಸೊಸೈಟಿ, ಪ್ರಜ್ಞಾವರ್ಧಿನೀ ಟ್ರಸ್ಟ್, ಸಮ್ಯಕ್ ಪ್ರತಿಷ್ಠಾನ ಮುಂತಾದವುಗಳು. ಈ ಎಲ್ಲ ಸಂಸ್ಥೆಗಳಿಗೆ ಹಾಗೂ ಸಂಸ್ಕೃತ ಪೋಷಕರಿಗೆ ವಿಶ್ವವಿದ್ಯಾಲಯವು ಆಭಾರಿಯಾಗಿದೆ.

13.08.2025ರಂದು ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಅದ್ದೂರಿಯಾಗಿ ಸಂಸ್ಕೃತೋತ್ಸವದ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂದು ನಾಡಿನ ಅನೇಕ ಗಣ್ಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಅಂದು ಸಂಸ್ಕೃತೋತ್ಸವದಲ್ಲಿ ಮಕ್ಕಳಿಗಾಗಿ ವಿವಿಧ ಸ್ತರಗಳಲ್ಲಿ ಸ್ಪರ್ಧೆಗಳನ್ನು, ಸಂಸ್ಕೃತಕ್ಕಾಗಿ ನಡೆ ಎಂಬ ಕಾರ್ಯಕ್ರಮವನ್ನೂ, ಯುವಕರಿಗಾಗಿ ಕವಿಗೋಷ್ಠಿಯನ್ನು, ಯುವವಿದ್ವಾಂಸರಿಗಾಗಿ ಶಾಸ್ತ್ರ ಗೋಷ್ಠಿಯನ್ನು ಹಾಗೂ ಎಲ್ಲರಿಗಾಗಿ ಆನ್‌ಲೈನ್ ಸಂಸ್ಕೃತ ಶ್ಲೋಕಪಠನ ಕಾರ್ಯಕ್ರಮಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ವಿವರ ಈ ಕೆಳಗಿನಂತಿದೆ.

**ಎಲ್ಲ ಸರ್ಧೆಗಳು ನಡೆಯುವ ಸ್ಥಾನ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆವರಣ**

**ವಿಶ್ವಾವಸು ಸಂವತ್ಸರದ ಶ್ರಾವಣ ಶುದ್ಧ ಪೂರ್ಣಿಮೆ**

**ದಿನಾಂಕ : 13-08-2025 । ಸಮಯ : ಬೆಳಿಗ್ಗೆ 7.30**

Scanned with OKEN Scanner

# ಸ್ಪರ್ಧೆಗಳು ಮತ್ತು ಸ್ಪರ್ಧೆಯ ನಿಯಮಗಳು

## ಸಂಸ್ಕೃತಗೀತಗಾಯನ ಸ್ಪರ್ಧೆ :

ಸ್ಪರ್ಧೆಯಲ್ಲಿ ಸಂಸ್ಕೃತ ಭಾರತೀ ಪ್ರಕಾಶನದ ಗೀತ ಸಂಸ್ಕೃತಂ ಅಥವಾ ಗೇಯ ಸಂಸ್ಕೃತಂ ಪುಸ್ತಕದಿಂದ ಆಯ್ದ ಹಾಡುಗಳನ್ನು ಮಾತ್ರ ಪ್ರಸ್ತುತಿ ಪಡಿಸಬಹುದಾಗಿದೆ. ಈ ಸ್ಪರ್ಧೆಯಲ್ಲಿ 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಮಾತ್ರ ಭಾಗವಹಿಸಬಹುದಾಗಿದೆ. ಶ್ರುತಿ ಪೆಟ್ಟಿಗೆಯ ಹೊರತಾಗಿ ಇನ್ನಾವುದೇ ವಿಧದ ವಾದ್ಯಗಳನ್ನು ಬಳಸುವಂತಿಲ್ಲ. ಮೂರು ನಿಮಿಷಗಳ ಅವಧಿಯಲ್ಲಿ ಗೀತೆಯನ್ನು ಪ್ರಸ್ತುತ ಪಡಿಸಬೇಕಿದೆ. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ಮಂಜುನಾಥ ಭಟ್, ಪ್ರಾಂಶುಪಾಲರು, ಗೋಕರ್ಣ ಸಂ.ಕಾಲೇಜು. ದೂ : 9483824050
2. ಡಾ. ಕವಿತಾ ಬಿರಾದಾರ್, ಸಹಾಯಕ ಗ್ರಂಥ ಪಾಲಕರು, ಕಸಂವಿ, ದೂ : 9611244093

## ಸಂಸ್ಕೃತಕಥಾಕಥನ ಸ್ಪರ್ಧೆ :

ಯಾವುದಾದರೂ ಸಂಸ್ಕೃತ ಕಥೆಯನ್ನು 4–5 ನಿಮಿಷಗಳಲ್ಲಿ ನಿರರ್ಗಳವಾಗಿ (ಅಭಿನಯಪೂರ್ವಕವಾಗಿಯೂ) ಪ್ರಸ್ತುತಿ ಪಡಿಸುವುದು. ಈ ಸ್ಪರ್ಧೆಯಲ್ಲಿ 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಮಾತ್ರ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ಭಾಸ್ಕರ ಭಟ್ ಜೋಶಿ, ಸಹಾಯಕ ಪ್ರಾಧ್ಯಾಪಕರು, ಕಸಂವಿ, ದೂ : 9742269403
2. ಡಾ. ನಾರಾಯಣ ಸ್ವಾಮಿ, ಯೋಜನಾ ಸಹಾಯಕರು, ಕಸಂವಿ, ದೂ : 8317428412
3. ಡಾ. ತೇಜಸ್ವಿನಿ ಬಿದರಿ, ಯೋಜನಾ ಸಹಾಯಕರು, ಕಸಂವಿ, ದೂ : 8123075393

## ಭಗವದ್ಗೀತಾ ಕಂಠಪಾಠ ಸ್ಪರ್ಧೆ :

ಭಗವದ್ಗೀತೆಯ 15ನೆಯ ಅಧ್ಯಾಯದ ಮೊದಲ ಹತ್ತು ಶ್ಲೋಕಗಳ ಕಂಠಪಾಠ ಮಾಡಿ ಪ್ರಸ್ತುತಪಡಿಸುವುದು. ಉಚ್ಚಾರಣೆ ಸ್ಪಷ್ಟವಾಗಿರಬೇಕು. ರಾಗವಾಗಿ ಹಾಡಬಹುದು. (ಮಧ್ಯದಿಂದ ಹೇಳುವುದು, ತಿರುಗಿಸಿ ಹೇಳುವುದು ಮುಂತಾದ ಚಮತ್ಕೃತಿಗಳು ಆಯ್ಕೆಯಾಗಿರುತ್ತವೆ.) ಈ ಸ್ಪರ್ಧೆಯಲ್ಲಿ 1ರಿಂದ 5ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ಋಷಿದೇವ ಭಾರ್ಗವ್, ಸಹಾಯಕ ಪ್ರಾಧ್ಯಾಪಕರು, ಕಸಂವಿ, ದೂ : 9886701203
2. ಡಾ. ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಕಸಂವಿ, ದೂ : 9379779278
3. ಡಾ. ರೇಖಾ ದೇವಿ ಹೆಚ್.ಎಸ್, ಸಹಾಯಕ ಪ್ರಾಧ್ಯಾಪಕರು, ಕಸಂವಿ, ದೂ : 9591071457
4. ವಿದುಷಿ ವಿಜಯಲಕ್ಷ್ಮಿ ಕೆ.ಜಿ, ಯೋಜನಾ ಸಹಾಯಕರು, ಕಸಂವಿ, ದೂ : 6361817968

Scanned with OKEN Scanner

## ಆಶುಭಾಷಣ ಸ್ಪರ್ಧೆ :

ಈ ಸ್ಪರ್ಧೆಗಾಗಿ ಕೆಳಗೆ 20 ವಿಷಯಗಳನ್ನು ನೀಡಲಾಗಿದೆ.ಈ ಸ್ಪರ್ಧೆಯಲ್ಲಿ ಒಂಭತ್ತನೆಯ, ಹತ್ತನೆಯ ತರಗತಿಯ ವಿದ್ಯಾರ್ಥಿಗಳು ಮತ್ತು ಪ್ರಥಮ, ದ್ವಿತೀಯ ಪಿ.ಯು.ಸಿ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಆಯ್ಕೆಯಾದ ವಿಷಯದಲ್ಲಿ ವಿದ್ಯಾರ್ಥಿಯು 5 ನಿಮಿಷಗಳ ಕಾಲ ನಿರರ್ಗಳವಾಗಿ ಸಂಸ್ಕೃತದಲ್ಲಿ ಮಾತನಾಡಬೇಕು. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸ ಬಹುದಾಗಿದೆ.

1. ಡಾ. ರಾಘವ ಕೆ.ಎಲ್, ಯೋಜನಾ ಸಹಾಯಕರು, ಕಸಂವಿ, ದೂ : 7892668172
2. ಡಾ. ಹೇಮರಾಜು ಎನ್.ಎಸ್, ಯೋಜನಾ ಸಹಾಯಕರು, ಕಸಂವಿ, ದೂ : 8310719147

## ರಸಪ್ರಶ್ನೆ ಸ್ಪರ್ಧೆ :

ರಸಪ್ರಶ್ನೆ ಸ್ಪರ್ಧೆಯಲ್ಲಿ ಹತ್ತನೆಯ ತರಗತಿ ಮತ್ತು ಪ್ರಥಮ, ದ್ವಿತೀಯ ಪಿ.ಯು.ಸಿ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ವೇದೇಶ ನಾಗಸಂಪಿಗೆ ಮತ್ತು ತಂಡ, ದೂ : 8296492329

## ಶಾಸ್ತ್ರಾರ್ಥ ಸಭೆ :

ಭಾರತ ದೇಶದ ಅನೇಕ ಯುವ ವಿದ್ವಾಂಸರು ಈ ಸಭೆಯಲ್ಲಿ ಭಾಗವಹಿಸಿ ಅನೇಕ ಶಾಸ್ತ್ರಗಳಲ್ಲಿ ವಾಕ್ಯಾರ್ಥವನ್ನು ನಡೆಸುವರು. ಜಿಜ್ಞಾಸುಗಳು, ಶಾಸ್ತ್ರ ಪ್ರೇಮಿಗಳು ಈ ವಾಕ್ಯಾರ್ಥ ಸಭೆಯಲ್ಲಿ ಭಾಗವಹಿಸಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ಕೆ.ಇ. ಶ್ರೀವೆಂಕಟನಾಥನ್, ವಿಭಾಗಾಧ್ಯಕ್ಷರು, ಕಸಂವಿ, ದೂ : 9676973444
2. ಡಾ. ಅರ್ಚನಾ ಕಾರಂತ, ಅತಿಥಿ ಉಪನ್ಯಾಸಕರು, ಕಸಂವಿ, ದೂ : 9481904228

## ಕವಿಗೋಷ್ಠಿ :

ಕವಿಗೋಷ್ಠಿಯಲ್ಲಿ ಭಾರತದ ಸಂಸ್ಕೃತ ಯುವ ಕವಿಗಳನ್ನು ಆಹ್ವಾನಿಸಿ ಕವಿತಾವಾಚನ ನಡೆಸಲಾಗುವುದು. ಸಹೃದಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ವಿನಯಾಚಾರ್ಯ ಪಿ, ಡೀನ್, ವೇದಾಂತ ವಿಭಾಗ, ದೂ : 9845324894
2. ಡಾ. ಪ್ರಭುಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಕಸಂವಿ, ದೂ : 9482075373
3. ಡಾ. ಶಕುಂತಲಾ ಭಟ್, ಯೋಜನಾ ಸಹಾಯಕರು, ಕಸಂವಿ, ದೂ : 9481129511

Scanned with OKEN Scanner

## ಸಂಸ್ಕೃತ ಶ್ಲೋಕಪಠಣ :

ಸಂಸ್ಕೃತ ಪ್ರಚಾರಕ್ಕಾಗಿ ಹಾಗೂ ಸಂಸ್ಕೃತ ಅಭಿಮಾನಿಗಳಿಗೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಯಾವುದೇ ವಯಸ್ಸಿನ ಮಿತಿ ಇರುವುದಿಲ್ಲ. ಭಾಗವಹಿಸುವವರು ಶುದ್ಧ ಉಚ್ಚಾರಣೆಯಲ್ಲಿ 3 ನಿಮಿಷಗಳ ಸಂಸ್ಕೃತ ಶ್ಲೋಕದ ವಿಡಿಯೋವನ್ನು ರೆಕಾರ್ಡ್ ಮಾಡಿ ಅಪ್‌ಲೋಡ್ ಮಾಡುವುದು. ಇದರ ಲಿಂಕ್‌ನ್ನು ನಂತರ ಕಳುಹಿಸಲಾಗುವುದು. ಭಾಗವಹಿಸಿದವರೆಲ್ಲರಿಗೂ ಪ್ರಶಂಸಾ ಪತ್ರವನ್ನು ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಯೋಜಕರಾದ ಕೆಳಕಂಡ ವಿದ್ವಾಂಸರನ್ನು ಸಂಪರ್ಕಿಸಬಹುದಾಗಿದೆ.

1. ಡಾ. ವನರಾಜ ಬಿ.ಕೆ, ದೂ : 9731027548

## ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಸ್ಪರ್ಧೆ :

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಸಂಸ್ಕೃತ ಮತ್ತು ಇತರ ಶಾಸ್ತ್ರಗಳ ಅಧ್ಯಯನವು ನಡೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ಕೆಳಕಂಡ ವಿಷಯಗಳಲ್ಲಿ ಭಾಷಣ ಸ್ಪರ್ಧೆಯು ನಡೆಯಲಿದೆ. ಕೆಳಕಂಡ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು 5 ನಿಮಿಷಗಳ ಕಾಲ ನಿರರ್ಗಳವಾಗಿ ಸಂಸ್ಕೃತದಲ್ಲಿ ಮಾತನಾಡಬೇಕು. ಅನಂತರ 1 ನಿಮಿಷ ಆ ವಿಷಯದಲ್ಲಿ ಪ್ರಶ್ನೋತ್ತರ ನಡೆಯಲಿದೆ. ಈ ಸ್ಪರ್ಧೆಗೆ ಯಾವುದೇ ವಯೋಮಿತಿ ಇರುವುದಿಲ್ಲ.

1. ಡಾ. ತೇಜಸ್ವಿನಿ ಡಿ, ಯೋಜನಾ ಸಹಾಯಕರು, ಕಸಂವಿ, ದೂ : 9845614502
2. ಡಾ. ಜಗನ್ನಾಥ ಪೂಜಾರ, ಯೋಜನಾ ಸಹಾಯಕರು, ಕಸಂವಿ, ದೂ : 9036143822

**ಸರ್ವರಿಗೂ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಸಹಯೋಗ ಸಂಸ್ಥೆಗಳು**
**ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ, ಯಶಸ್ವಿಯಾಗಿಸುವಂತೆ**
**ಎಲ್ಲ ಸಂಸ್ಕೃತ ಪ್ರೇಮಿಗಳನ್ನು ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತದೆ.**

**ಪ್ರೊ. ವಿ.ಗಿರೀಶ್‌ಚಂದ್ರ**
ಕುಲಸಚಿವರು, ನಿರ್ದೇಶಕರು, ಅಧ್ಯಯನಾಂಗ

**ಡಾ. ಅಹಲ್ಯಾ ಎಸ್.**
ಕುಲಪತಿಗಳು

**ಪ್ರೊ. ಸಿ.ಪಾಲಯ್ಯ**
ಸಂಯೋಜಕರು

**ಡಾ. ಜಯರೇವಣ್ಣ ಎಂ.ವಿ**
ಸಂಯೋಜಕರು



**ಎಲ್ಲಾ ಯೋಜನಾ ಸಹಾಯಕರು**
**ಸಹಸಂಯೋಜಕರು**

CLICK HERE TO REGISTER
https://forms.gle/VsvkWn46xmBbAmBa6

Scanned with OKEN Scanner